ಶ್ರೀ ನೆ.ಲ ನರೇಂದ್ರಬಾಬು :- ಹಾಗಾದರೆ ಪುನಃ ಏಕೆ ಮಾನ್ಯ ಮುಖ್ಯಮಂತ್ರಿಗಳು ತಪ್ಪು ಮಾಹಿತಿ ಕೊಡುತ್ತಾರೆ? ನನಗೆ ಅರ್ಥವಾಗುತ್ತಿಲ್ಲ.

ಶ್ರೀ ಡಿ.ವಿ. ಸದಾನಂದಗೌಡ :- ಸನ್ಮಾನ್ಯ ಸಭಾಧ್ಯಕ್ಷರೆ, ನಮ್ಮ ಪ್ರತಿ ಪಕ್ಷದ ನಾಯಕರು ಒಂದಷ್ಟು ವಿಚಾರಗಳನ್ನು ಪ್ರಸ್ತಾಪ ಮಾಡಿದರು. CID ಯ ಬಗ್ಗೆ ಸ್ವಲ್ಪ ಏನೋ ಮನಸ್ಸಿನಲ್ಲಿ ಒಂದು ಸಣ್ಣ ಸಮಾಧಾನವಿಲ್ಲದ ರೀತಿಯಲ್ಲಿ ಅವರು ಪ್ರಸ್ತಾಪ ಮಾಡಿದರು.

ಶ್ರೀ ಸಿದ್ದರಾಮಯ್ಯ :- ನಾನು ನನ್ನ ಅನುಭವದ ಆಧಾರದಲ್ಲಿ ಹೇಳಿದ್ದೇನೆ.

ಶ್ರೀ ಡಿ.ವಿ. ಸದಾನಂದಗೌಡ :- ನೀವೂ ಕೂಡ ಹಿಂದೆ ಈ ಭಾಗದಲ್ಲಿ ಮಂತ್ರಿಯಾಗಿ ಕುಳಿತುಕೊಂಡು ಇದನ್ನೆಲ್ಲಾ ನಿರ್ವಹಣೆ ಮಾಡಿದವರು. ಇವತ್ತು CBI ಬಗ್ಗೆ ಕೂಡ ದೇಶದಲ್ಲಿ ಏನೆಲ್ಲಾ ಮಾತನಾಡುತ್ತಾರೆ ಎಂಬುದು ಇಡೀ ಜಗತ್ತಿಗೆ ಗೊತ್ತಿರುವಂಥ ಸಂಗತಿ. ಆದಕಾರಣ ಯಾವುದೋ institution ನ ಬಗ್ಗೆ ನಾವು ಒಂದು ರೀತಿಯಲ್ಲಿ ಅಗೌರವದಿಂದ ಪ್ರಸ್ತಾಪ ಮಾಡಬೇಕಾದ ಅಗತ್ಯವಿಲ್ಲ. ಇವತ್ತು CID ಯಲ್ಲಿ ಒಳ್ಳೆಯ upright officers ಇರುವುದನ್ನು ನಾವು ಗಮನಿಸಿದ್ದೇವೆ. ನಮಗೆ ವಿಶ್ವಾಸವಿದೆ. ಅದರಿಂದ ಸೂಕ್ತವಾದಂಥ ತನಿಖೆಯಾಗುತ್ತದೆ. ಅದರಿಂದ ಬರುವಂಥ ವರದಿಗಳು ಖಂಡಿತವಾಗಿಯೂ ಸತ್ಯದ ವರದಿಗಳು ಬರುತ್ತದೆಂದು ಹೇಳುವಂಥ ವಿಶ್ವಾಸ ನಮಗಿದೆ. ಆ ಹಿನ್ನೆಲೆಯಲ್ಲಿ ಇದನ್ನು ಮಾಡುತ್ತಿದ್ದೇವೆಂದು ಹೇಳಲಿಕ್ಕೆ ಇಚ್ಛೆಪಡುತ್ತಿದ್ದೇನೆ. ಎರಡನೆಯದಾಗಿ, ಇವತ್ತು ನಾನು ಪ್ರಾರಂಭದಲ್ಲಿ ಹೇಳಿದಾಗಲೂ ಕೂಡ ತಮ್ಮಲ್ಲಿ ಒಂದು ಹೇಳಿದೆ. ಪ್ರಾಥಮಿಕ ಮಾಹಿತಿಗಳ ಪ್ರಕಾರ ನಮಗೆ ಸಿಕ್ಕಿದ ವರದಿಯ ಪ್ರಕಾರ ಈ ಸಂಗತಿಗಳು ಯಾವುದೇ ಸಂದರ್ಭದಲ್ಲಿಯೂ ಸಹಿತ ಅದಕ್ಕೆ link ಆಗಿಲ್ಲವೆಂದು ಹೇಳುವಂಥದ್ದು. ಆದರೆ, ತನಿಖೆಯಾದ ಮೇಲೆ ಸತ್ಯಸಂಗತಿಗಳು ಬಂದ ಮೇಲೆ ಮತ್ತೆ ಅದು ಸತ್ಯ ಆದರೆ ಅದು ಸತ್ಯವೆಂದು ಹೇಳುವುದಕ್ಕೆ ನಾನೇನು ಹಿಂದು ಮುಂದು ನೋಡುವುದಿಲ್ಲ. ಅದನ್ನು ಮಾಡುವಂಥ ಕೆಲಸ ಕಾರ್ಯಗಳನ್ನು ಮಾಡುತ್ತೇವೆ.

8. ವಿಷಯ : ವಕ್ಫ್ ಬೋರ್ಡ್‌ನಲ್ಲಿ ಸುಮಾರು 2 ಲಕ್ಷ ಕೋಟಿ ರೂಪಾಯಿಗಳಷ್ಟು ಅವ್ಯವಹಾರ ಆಗಿರುವ ಕುರಿತು ಅಲ್ಪ ಸಂಖ್ಯಾತರ ಆಯೋಗದ ಅಧ್ಯಕ್ಷರು ನೀಡಿರುವ ವರದಿಯ ಬಗ್ಗೆ.

ಶ್ರೀ ಸಿ.ಟಿ. ರವಿ (ಚಿಕ್ಕಮಗಳೂರು) :- ಮಾನ್ಯ ಅಧ್ಯಕ್ಷರೆ, ಅಲ್ಪ ಸಂಖ್ಯಾತರ ಆಯೋಗ ಸರ್ಕಾರಕ್ಕೆ ನೀಡಿರುವಂಥ ವರದಿಯಲ್ಲಿ ವಕ್ಫ್‌ಗೆ

ಸಂಬಂಧಪಟ್ಟಂತೆ ಹಲವಾರು ಆಸ್ತಿಗಳು ಒತ್ತುವರಿಯಾಗಿದ್ದು, ಇದರಲ್ಲಿ ಪ್ರಮುಖ ರಾಜಕಾರಣಿಗಳು ಭಾಗಿಯಾಗಿದ್ದಾರೆಂಬ ಸುದ್ದಿ ಇವತ್ತಿನ ಎಲ್ಲ ದಿನಪತ್ರಿಕೆಗಳ ಹೆಡ್ ಲೈನ್‌ನಲ್ಲಿ ಸುದ್ದಿಯಾಗಿದೆ. ಅಂದರೆ, 2 ಲಕ್ಷ ಕೋಟಿ ರೂಪಾಯಿಯ ಅಧಿಕ ಮೌಲ್ಯದ 27 ಸಾವಿರ ಎಕರೆಗೂ ಹೆಚ್ಚು ಜಮೀನಿನ ಒತ್ತುವರಿಯಾಗಿರುವುದಲ್ಲದೆ ಲಕ್ಷಾಂತರ ಕೋಟಿ ರೂಪಾಯಿಗಳ ಹಣಕಾಸಿನ ದುರುಪಯೋಗವಾಗಿದೆ ಎಂಬ ಅಂಶ ಇದೆ ಎನ್ನತಕ್ಕಂಥದು ನಿಜವೇ? ಪತ್ರಿಕೆಗಳಲ್ಲಿ ಇದರ ಬಗ್ಗೆ ವರದಿ ಬಂದಿರತಕ್ಕಂಥದ್ದು ನಿಜವಾಗಿದ್ದರೆ ಯಾರ್ಯಾರು ಅಲ್ಪಸಂಖ್ಯಾತರ ಮುಖಂಡರೆಂದು ಸಾರ್ವಜನಿಕವಾಗಿರುವವರು ಹಾಗೂ ನೇತಾರರೆಂದು ಅನಿಸಿಕೊಂಡಿರುವವರು ಇದರಲ್ಲಿ ಭಾಗಿಯಾಗಿದ್ದಾರೆಂಬ ಸತ್ಯ ಇದರಲ್ಲಿ ಇದ್ದರೆ, ಇದಕ್ಕಿಂತ ಆತಂಕ ಪಡುವಂಥ ವಿಷಯ ಇನ್ನೊಂದು ಇಲ್ಲ. ಏಕೆಂದರೆ, ಬೇಲಿಯೇ ಎದ್ದು ಹೊಲ ಮೇಯ್ದ ಕತೆಗೂ ಇದಕ್ಕೂ ಭಿನ್ನವಾಗುವುದಿಲ್ಲ. ಆದ್ದರಿಂದ, ಈ ವರದಿಯಲ್ಲಿ ಸತ್ಯಾಂಶ ಇದೆ ಎಂಬುವುದಾದರೆ, ಸರ್ಕಾರ ಯಾವುದೇ ಮುಲಾಜಿಗೆ ಒಳಗಾಗದೆ ಕ್ರಮ ಕೈಗೊಳ್ಳಬೇಕಾಗುತ್ತದೆ. ಏಕೆಂದರೆ, ಈ ಆಸ್ತಿಯನ್ನು ಉಳಿಸುವವರು ಯಾರು? ಇವತ್ತಿನ ದಿವಸ ದೇವಾಲಯಗಳಿಗೆ ಸಂಬಂಧಪಟ್ಟಂತೆ ಸಾವಿರಾರು ಕೋಟಿ ರೂಪಾಯಿಗಳ ಆಸ್ತಿ ಲೂಟಿಯಾಗಿದೆ. ಅದೇ ರೀತಿಯಾಗಿ ವಕ್ಫ್ ಪ್ರಾಪರ್ಟಿ ಕೂಡ ಲೂಟಿಯಾಗುತ್ತದೆಂದರೆ ಸಾರ್ವಜನಿಕ ಆಸ್ತಿಯನ್ನು ಉಳಿಸತಕ್ಕಂಥ ಹೊಣೆಗಾರಿಕೆ ಯಾರಿಗೆ ಇದೆ?

ಶ್ರೀ ಸಿದ್ದರಾಮಯ್ಯ :– ಮಾನ್ಯ ಅಧ್ಯಕ್ಷರೆ, ಅದನ್ನು ಮಂಡಿಸದೆ ಈ ರೀತಿಯಾಗಿ ಚರ್ಚೆ ಮಾಡಿದರೆ ಹೇಗೆ? ಮಂಡಿಸಿದರೆ ಅದರ ಚರ್ಚೆಯಲ್ಲಿ ನಾವೂ ಕೂಡ ಭಾಗಿಯಾಗುತ್ತೇವೆ.

ಶ್ರೀ ಸಿ.ಟಿ. ರವಿ :– ಸಾರ್ವಜನಿಕ ಆಸ್ತಿ ಲೂಟಿಯಾಗಿರುವುದರಿಂದ ಮಾನ್ಯ ಸಿದ್ದರಾಮಯ್ಯನವರು ಇದಕ್ಕೂ ಕೂಡ ಸಿಬಿಐ ತನಿಖೆ ಮಾಡಬೇಕೆಂದು ಒತ್ತಾಯಿಸುತ್ತಾರೆಂದು ನಾನು ಭಾವಿಸಿಕೊಂಡಿದ್ದೇನೆ. ಏಕೆಂದರೆ, ಸಾರ್ವಜನಿಕ ಆಸ್ತಿ ಬಗ್ಗೆ ಕಾಳಜಿ ಇರುವುದರಿಂದ ಸಿಬಿಐ ತನಿಖೆ ಆಗಲೆಂದು ಅವರು ಕೂಡ ಒತ್ತಾಯಿಸುತ್ತಾರೆಂದು ತಿಳಿದುಕೊಂಡಿದ್ದೇನೆ.

(ಗೊಂದಲ)

ಅಧ್ಯಕ್ಷರು :– ಮಾನ್ಯ ರೇವಣ್ಣನವರೆ, ಈ ವಿಷಯದ ಬಗ್ಗೆ ತಾವು ಒಂದು ನಿಮಿಷ ಮಾತನಾಡಿ. ಉಳಿದವರಿಗೆ ಆನಂತರ ಅವಕಾಶ ಕೊಡುತ್ತೇನೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ :– ಮಾನ್ಯ ಮುಖ್ಯಮಂತ್ರಿಗಳು ವರದಿಯನ್ನು ಇಲ್ಲಿ ಮಂಡಿಸಿದರೆ ನಾವು ಓದಿ ಚರ್ಚೆ ಮಾಡುತ್ತೇವೆ.

(ಗೊಂದಲ)

ಶ್ರೀ ಸಿ.ಟಿ. ರವಿ :– ಮಾನ್ಯ ವಿರೋಧ ಪಕ್ಷದ ನಾಯಕರು ಯಾರ ಪರ ಮಾತನಾಡುತ್ತಿದ್ದಾರೆಂದು ಅರ್ಥವಾಗುತ್ತಿಲ್ಲ. ಸಾರ್ವಜನಿಕ ಆಸ್ತಿಯನ್ನು ಉಳಿಸುವುದಕ್ಕೆ ಮಾತನಾಡುತ್ತಿದ್ದಾರೆಯೋ ಅಥವಾ ಅಪರಾಧಿಗಳನ್ನು ರಕ್ಷಣೆ ಮಾಡುವುದಕ್ಕೆ ಮಾತನಾಡುತ್ತಿದ್ದಾರೆಯೋ ಅರ್ಥವಾಗುತ್ತಿಲ್ಲ.

(ಗೊಂದಲ)

ಶ್ರೀ ಸಿದ್ದರಾಮಯ್ಯ :– ಮಾನ್ಯ ಅಧ್ಯಕ್ಷರೆ, ಉಪ್ಪು ತಿಂದಿರುವವರು ನೀರು ಕುಡಿಯಲಿ. ಆದ್ದರಿಂದ ತನಿಖೆ ಮಾಡಿಸಿ.

ಶ್ರೀ ಹೆಚ್.ಡಿ. ರೇವಣ್ಣ :– ಮಾನ್ಯ ಅಧ್ಯಕ್ಷರೆ, ಈ ವಿಷಯವನ್ನು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡುವುದಕ್ಕೋಸ್ಕರ ಇವತ್ತು ಬೆಳಿಗ್ಗೆ ಪತ್ರವನ್ನು ಕೊಟ್ಟಿದ್ದೇನೆ. ಏತಕ್ಕೆಂದರೆ, ನಮ್ಮ ಕಡೆಯ ಕೆಲವು ಸದಸ್ಯರ ಹೆಸರುಗಳು ಅಂದರೆ ಉದಾಹರಣೆಗೆ ಹೇಳುವುದಾದರೆ, ಮಾನ್ಯ ಜಮೀರ್ ಅಹ್ಮದ್ ಖಾನ್‌ರವರ ಹೆಸರು ಪತ್ರಿಕೆಯಲ್ಲಿ ಬಂದಿದೆ. ಇದರ ಬಗ್ಗೆ ಏನು ಹೇಳುತ್ತೀರೆಂದು ನಾನು ಮಾನ್ಯ ಜಮೀರ್ ಅಹ್ಮದ್ ಖಾನ್‌ರವರನ್ನು ಕೇಳಿದಾಗ ಈ ವಿಷಯ ಏನೆಂಬುದು ನನಗೆ ಗೊತ್ತಿಲ್ಲ ಎಂದು ಹೇಳಿದ್ದಾರೆ. ಯಾವುದೇ ಪತ್ರಿಕೆಯಲ್ಲಿ ನೋಡಿದರೆ ಸುಮಾರು 2 ಲಕ್ಷ ಕೋಟಿ ರೂಪಾಯಿಗಳಷ್ಟು ಅವ್ಯವಹಾರವಾಗಿದೆ ಎಂದು ಪತ್ರಿಕೆಗಳಲ್ಲಿ ಬಂದಿದೆ. ರಾಜ್ಯ ವಕ್ಫ್ ಮಂಡಳಿಯ ಶೇಕಡ 50ಕ್ಕೂ ಹೆಚ್ಚು ಆಸ್ತಿ ದುರುಪಯೋಗವಾಗಿದೆ. ಮಂಡಳಿಯಲ್ಲಿ ನಡೆದಿರುವ ಅವ್ಯವಹಾರದ ಒಟ್ಟು ಅಂದಾಜು ವೆಚ್ಚ 2 ಲಕ್ಷ ಕೋಟಿ ರೂಪಾಯಿ. ಈ ಕುರಿತು ತನಿಖೆ ನಡೆಸುವಂತೆ ರಾಜ್ಯ ಅಲ್ಪಸಂಖ್ಯಾತರ ಆಯೋಗದ ಅಧ್ಯಕ್ಷರು ಮಾನ್ಯ ಮುಖ್ಯಮಂತ್ರಿಯವರು ಅರ್ಜಿಯನ್ನು ಕೊಟ್ಟಿದ್ದಾರೆ. 2,585 ಎಕರೆ ಪೈಕಿ 1803 ಎಕರೆ ಜಮೀನು ಒತ್ತುವರಿಯಾಗಿದ್ದು, ಒಟ್ಟು ಸುಮಾರು 2 ಲಕ್ಷ ಕೋಟಿ ರೂಪಾಯಿಗಳಷ್ಟು ಅವ್ಯವಹಾರವಾಗಿದೆ ಎಂದು ಹೇಳಿದ್ದಾರೆ. ಆಯೋಗದ ಅಧ್ಯಕ್ಷರು ವರದಿಯನ್ನು ಮಾನ್ಯ ಮುಖ್ಯ ಮಂತ್ರಿಯವರಿಗೆ ಸಬ್‌ಮಿಟ್ ಮಾಡಿದ್ದಾರೆಂದು ಎಲ್ಲಾ ಪತ್ರಿಕೆಗಳಲ್ಲಿ, ಎಲೆಕ್ಟ್ರಾನಿಕ್ ಮೀಡಿಯಾದಲ್ಲಿ ರಿಪೋರ್ಟ್ ಆಗಿದೆ. ಆದ್ದರಿಂದ, ಸದರಿ ವರದಿಯನ್ನು ಈ ಸದನದ ಮುಂದೆ ಮಂಡಿಸಬೇಕೆಂದು ಮಾನ್ಯ ಮುಖ್ಯಮಂತ್ರಿಯವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಏಕೆಂದರೆ, ಇದು ರಾಜ್ಯದ ಆಸ್ತಿಯಾಗಿದೆ. ಅಲ್ಪಸಂಖ್ಯಾತರ ಹೆಸರಿನಲ್ಲಿ ಯಾರ್ಯಾರು ಲೂಟಿ ಮಾಡಿದ್ದಾರೆಯೋ ಅವರ ಹೆಸರು ಈಚೆಗೆ ಬರಬೇಕಾಗುತ್ತದೆ. ಅದು ಯಾರೇ

ಇರಲಿ, ಮಾನ್ಯ ಜಮೀರ್ ಅಹಮದ್ ಖಾನ್ ಮಾಡಿದ್ದರೆ ಅವರ ಮೇಲೂ ಸಹ ಕ್ರಮ ತೆಗೆದುಕೊಳ್ಳಬೇಕು. ಸನ್ಮಾನ್ಯ ಮುಖ್ಯಮಂತ್ರಿಗಳು ಇದನ್ನು ಬಹಳ ಗಂಭೀರವಾಗಿ ತೆಗೆದುಕೊಂಡು ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು. ಏಕೆಂದರೆ, ಒಂದಲ್ಲಾ ಎರಡಲ್ಲಾ ಸುಮಾರು 2 ಲಕ್ಷ ಕೋಟಿ ರೂಪಾಯಿಗಳ ಅವ್ಯವಹಾರವಾಗಿದೆ ಎಂದರೆ ಅರ್ಥ ಏನು?

ಶ್ರೀ ಬಿ.ಜಡ್. ಜಮೀರ್ ಅಹ್ಮದ್ ಖಾನ್ :– ಮಾನ್ಯ ಸಭಾಧ್ಯಕ್ಷರೆ, ಎರಡು ಲಕ್ಷ ಕೋಟಿ ರೂಪಾಯಿಗಳೆಂದರೆ ನಮ್ಮ ಸರ್ಕಾರದ ಎರಡು ವರ್ಷದ ಬಜೆಟ್‌ಗಳಷ್ಟು ಆಗುತ್ತದೆ. ಪತ್ರಿಕೆಗಳಲ್ಲಿ ಮತ್ತು ಎಲೆಕ್ಟ್ರಾನಿಕ್ ಮೀಡಿಯಾದಲ್ಲಿ ನನ್ನ ಹೆಸರೂ ಸಹ ಬಂದಿದೆ. ಅಲ್ಪ ಸಂಖ್ಯಾತರ ಆಯೋಗದ ಅಧ್ಯಕ್ಷರು ನಿನ್ನೆ ದಿವಸ ವರದಿಯನ್ನು ಸನ್ಮಾನ್ಯ ಮುಖ್ಯ ಮಂತ್ರಿಯವರಿಗೆ ಕೊಟ್ಟಿದ್ದಾರೆ. ಆದ್ದರಿಂದ, ಆ ರಿಪೋರ್ಟ್‌ನಲ್ಲಿ ಯಾರ್ಯಾರ ಹೆಸರು ಇದೆ ಎಂಬುದು ಬಹಿರಂಗವಾಗಬೇಕು. ಆ ವರದಿಯಲ್ಲಿ ಯಾರ ಹೆಸರು ಇದೆಯೋ ಇಲ್ಲವೋ ಎಂದು ನೋಡದೆ ಮಾಧ್ಯಮದವರು ಎಲ್ಲರ ಹೆಸರು ಅಂದರೆ, ಜಮೀರ್ ಅಹ್ಮದ್ ಖಾನ್, ಮಾನ್ಯ ರೋಷನ್ ಬೇಗ್, ಮಾನ್ಯ ಖಿಮರುಲ್ ಇಸ್ಲಾಂ, ಮಾನ್ಯ ಹ್ಯಾರೀಸ್‌ರವರು ಇದ್ದಾರೆಂದು ಹೇಳಿದ್ದಾರೆ. ಆದರೆ, ಪರ್ಟಿಕ್ಯೂಲರ್ ಆಗಿ ಅದರಲ್ಲಿ ಯಾರು ಸೇರಿದ್ದಾರೆಂಬುದು ಬಹಿರಂಗವಾಗಬೇಕು. 2 ಲಕ್ಷ ಕೋಟಿ ರೂಪಾಯಿ ಸಣ್ಣ ಹಣವಲ್ಲ. 2 ಲಕ್ಷ ಕೋಟಿ ರೂಪಾಯಿ ಅವ್ಯವಹಾರವನ್ನು ಯಾರು ಮಾಡಿದ್ದಾರೆಂದು ಗೊತ್ತಾಗಬೇಕು. ಮತ್ತೆ ಇದರ ಬಗ್ಗೆ ನಾಳೆ ದಿವಸವೇ ಸಿಬಿಐ ತನಿಖೆಗೆ ವಹಿಸಬೇಕು. ಸಿಬಿಐ ತನಿಖೆಗೆ ಬಿಜೆಪಿ ಸರ್ಕಾರದ ಮಾನ್ಯ ಮುಖ್ಯ ಮಂತ್ರಿಗಳು ಒಪ್ಪುವುದಿಲ್ಲ. ಏತಕ್ಕೆ ಅವರು ಒಪ್ಪುವುದಿಲ್ಲವೆಂದರೆ, ಸಿಬಿಐ ಕಾಂಗ್ರೆಸ್‌ನ ಏಜೆಂಟ್ ಆಗಿದ್ದಾರೆಂದು ಅವರು ಸಿಬಿಐ ತನಿಖೆಗೆ ಒಪ್ಪುವುದಿಲ್ಲ. ಆದ್ದರಿಂದ, ನನ್ನ ಸ್ವಂತ ಭಾವನೆ ಏನೆಂದರೆ, 2 ಲಕ್ಷ ಕೋಟಿ ರೂಪಾಯಿ ಅವ್ಯವಹಾರ ಆಗಿರುವುದರಿಂದ ಇದರ ಬಗ್ಗೆ ತನಿಖೆ ಆಗಲೇ ಬೇಕು. ಆದ್ದರಿಂದ, ಮಾಜಿ ಲೋಕಾಯುಕ್ತರಾಗಿರುವ ಶ್ರೀ ಸಂತೋಷ್ ಹೆಗಡೆಯವರಿಂದ ತನಿಖೆ ಮಾಡಿಸಿದರೆ ಸರಿಯಾಗಿ ತನಿಖೆ ಆಗುತ್ತದೆ. ಏಕೆಂದರೆ, ಅವರು politically yield ಆಗುವುದಿಲ್ಲ. ನನ್ನ ಹೆಸರು ಪತ್ರಿಕೆಯಲ್ಲಿ ಬಂದಿರುವುದರಿಂದ ನನಗೆ ಬಹಳಷ್ಟು ನೋವಾಗಿದೆ. ಮಾನ್ಯ ಕುಮಾರ ಸ್ವಾಮಿಯವರು ಮುಖ್ಯ ಮಂತ್ರಿಯಾಗಿದ್ದಂಥ ಸಂದರ್ಭದಲ್ಲಿ ನಾನು ಸುಮಾರು 6 ತಿಂಗಳ ಅವಧಿಯವರೆಗೆ ವಕ್ಫ್ ಮಿನಿಸ್ಟರ್ ಆಗಿ ಕೆಲಸ ಮಾಡುವುದಕ್ಕೆ ಅವಕಾಶ ಸಿಕ್ಕಿತ್ತು. ನಾನು ಆ 6 ತಿಂಗಳ ಅವಧಿಯಲ್ಲಿ ಯಾರೂ, ಮಾಡುವುದಕ್ಕೆ ಸಾಧ್ಯವಾಗದಂಥ ಕೆಲಸವನ್ನು ಮಾಡಿದ್ದೇನೆ. ಅಂದರೆ, ನನ್ನ ಅವಧಿಯಲ್ಲಿ

ಮೂರು ಪ್ರಾಪರ್ಟಿಯನ್ನು ವಕ್ಫ್ ಪ್ರಾಪರ್ಟಿಗೆ ವಾಪಸ್ಸು ತೆಗೆದುಕೊಂಡಿದ್ದೇನೆ. ಮಾನ್ಯ ಮುಖ್ಯಮಂತ್ರಿಯವರ ಹತ್ತಿರ ಈ ಖಾತೆ ಇದೆ. ಬೇಕಾದರೆ ಪರಿಶೀಲನೆ ಮಾಡಿಕೊಳ್ಳಲಿ. ಯಾವುದೇ ರಾಜಕಾರಣಿ ಇದನ್ನು ಮಾಡಿರಲಿ ಪರವಾಗಿಲ್ಲ. ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಕ್ರಮ ತೆಗೆದುಕೊಂಡಿರುವ ವಿಷಯ ನಾಳೆ ದಿವಸ ಸದನದ ಮುಂದೆ ಮಂಡಿಸಬೇಕು. ಯಾರು ತಪ್ಪು ಮಾಡಿದ್ದಾರೆಯೋ ಅವರಿಗೆ ಗಲ್ಲು ಶಿಕ್ಷೆ ಆಗಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇದಕ್ಕೆ ಗಲ್ಲು ಶಿಕ್ಷೆಯೇ ಆಗಬೇಕು. ಬೇರೆ ಶಿಕ್ಷೆ ಇದಕ್ಕೆ ಇಲ್ಲ.

SRI QAMARUL ISLAM :- Let the documents be presented in the House. We are all ready for independent CBI enquiry to be conducted. As per my information, the main encroacher is the government. Main encroacher is the government . Main encroacher is the government. Government offices, Gulbarga City Municipality, Gulbarga S.P. Office, I will give the names. Agriculture office, Bijapur office. Semi-government, some of the institutions and then ಸಣ್ಣ ಪುಟ್ಟ poor people. ನನ್ನ ಮಾಹಿತಿ ಪ್ರಕಾರ public ಮತ್ತು ಸ್ವಲ್ಪ institutions, government and semi-government ಗೆ ಕೊಟ್ಟಿದ್ದಾರೆ Rs. 50 lakh crore wakfs properties ಸರ್ಕಾರದಲ್ಲಿ ಇದೆ.

ಶ್ರೀ ಬಿ.ಜಡ್. ಜಮೀರ್ ಅಹ್ಮದ್ ಖಾನ್ :- ಮಾನ್ಯ ಸಭಾಧ್ಯಕ್ಷರೆ, ಆ ವರದಿಯನ್ನು ಇವತ್ತೇ ಸದನದಲ್ಲಿ ಮಂಡಿಸಬೇಕು. ಅದರಲ್ಲಿ ಯಾರ್ಯಾರು ಇದ್ದಾರೆಂಬ ಸತ್ಯ ಹೊರಕ್ಕೆ ಬರುತ್ತದೆ.

(ಗೊಂದಲ)

ಅಧ್ಯಕ್ಷರು :- ಎಲ್ಲರೂ ಎದ್ದು ನಿಂತುಕೊಂಡರೆ ಹೇಗೆ?

(ಗೊಂದಲ)

ಶ್ರೀ ಬಿ.ಜಡ್. ಜಮೀರ್ ಅಹ್ಮದ್ ಖಾನ್ :- ಮಾನ್ಯ ಸಭಾಧ್ಯಕ್ಷರೆ, ಈ ಖಾತೆ ಮಾನ್ಯ ಮುಖ್ಯಮಂತ್ರಿಯವರ ಹತ್ತಿರ ಇದೆ. ಆದ್ದರಿಂದ, ಇವತ್ತೇ ಮಂಡಿಸಬೇಕು.

(ಗೊಂದಲ)

ಅಧ್ಯಕ್ಷರು :- ನೀವು ಈಗಾಗಲೇ ಮಾತನಾಡಿದ್ದೀರಿ. ಮತ್ತೆ ಏಕೆ ಮಾತನಾಡುವುದಕ್ಕೆ ಎದ್ದೇಳುತ್ತೀರಿ? ಮೊದಲು ಹಿಂದೆ ಇದ್ದವರು ಮಾತನಾಡಲಿ, ಆನಂತರ ತಾವು ಮಾತನಾಡಿ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ :– ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಯವರಿಗೆ ಅಲ್ಪಸಂಖ್ಯಾತರ ಆಯೋಗದ ಅಧ್ಯಕ್ಷರು ಕೊಟ್ಟಂಥ ವರದಿಯನ್ನು ನಾನು ನೋಡಿದೆ. ಅಂದರೆ, ಟಿ.ವಿ.ಯಲ್ಲಿ ನೋಡಿದೆ.

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ :– ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಯವರು ವರದಿಯನ್ನು ಮಾನ್ಯ ಜಯಚಂದ್ರರವರಿಗೆ ಕೊಟ್ಟಿದ್ದಾರೆಯೇ? ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ಸದನದಲ್ಲಿ ದಯಮಾಡಿ ಹೇಳಬೇಕು.

ಶ್ರೀ ಟಿ.ಬಿ. ಜಯಚಂದ್ರ :– ಮಾನ್ಯ ಅಧ್ಯಕ್ಷರೆ, ಅಲ್ಪ ಸಂಖ್ಯಾತರ ಆಯೋಗದ ಅಧ್ಯಕ್ಷರಾಗಿರುವ ಶ್ರೀ ಅನ್ವರ್ ಮಾನ್ಪಾಡಿಯವರು ನಿನ್ನೆ ದಿವಸ ರಾತ್ರಿ ಒಂದು ಮಾತನ್ನು ಹೇಳಿದ್ದನ್ನು ನಾನು ಟಿ.ವಿ.ಯಲ್ಲಿ ನೋಡಿದ್ದೇನೆ. ಅದೇನೆಂದರೆ, ನಾನು ಹಳ್ಳಿಹಳ್ಳಿಗಳು ಮತ್ತು ತಾಲ್ಲೂಕುಗಳಿಗೆ ಹೋದಾಗ ಜನರೇ ಬಂದು ನನಗೆ ಅರ್ಜಿ ಕೊಟ್ಟರು. ಆ ಮಾಹಿತಿಯ ಆಧಾರದ ಮೇಲೆ ವರದಿಯನ್ನು ಮಾಡಿದ್ದೇನೆಂಬ ಮಾತನ್ನು ಹೇಳಿದರು. ಅವರ ಮಾತನ್ನು ಕೇಳಿ ನಿಜಕ್ಕೂ ಆಶ್ಚರ್ಯವಾಯಿತು. ಆದರೆ, ನಾನು ಕೇಳಿ ತಿಳಿದುಕೊಂಡಿರುವುದು ಏನೆಂದರೆ, ಅಲ್ಪ ಸಂಖ್ಯಾತರ ಆಯೋಗ ಎಂದರೆ, ಅದು ನಿರ್ದಿಷ್ಟವಾಗಿ ಅಲ್ಪಸಂಖ್ಯಾತರ ಯೋಗಕ್ಷೇಮಕ್ಕೆ ಸೀಮಿತವಾಗಿದೆ ಎಂದು ನಾನು ತಿಳಿದುಕೊಂಡಿದ್ದೇನೆ. What is the mandate of this Minority Commission? What is the terms of reference for that Committee and when he was appointed ಮತ್ತು ಅವರ ಅವಧಿ expire ಆಯಿತು. ಎರಡನೆಯದಾಗಿ ನಾನು ನಿಜವಾಗಲೂ ಕೂಡ ಹೇಳುತ್ತೇನೆ. 2 ಲಕ್ಷ ಕೋಟಿ ರೂ.ಗಳು ಆಗಿದ್ದರೆ, ಅದನ್ನು ನಿಜವಾಗಲೂ ವಾಪಸ್ಸು ತರುವುದಾದರೆ ನಾವು ಮೆಚ್ಚಬೇಕಾಗುತ್ತದೆ. ಯಾರೇ ಆಗಲಿ ವಾಪಸ್ಸು ತರುವಂಥ ಕೆಲಸವನ್ನು ಮಾಡೋಣ. ಇದು ವಕ್ಫ್‌ಬೋರ್ಡ್ ಆಸ್ತಿ, ಸಾರ್ವಜನಿಕರ ಆಸ್ತಿ ಆಗಿರುವುದರಿಂದ ದಯಮಾಡಿ ಇದರ ಸಮಗ್ರವಾದ ವರದಿಯನ್ನು ಇಡಬೇಕು. ಪದೇ ಪದೇ ಅವರು ಒಂದು ಮಾತನ್ನು ಹೇಳುತ್ತಿದ್ದರು. ನಾನು ಯಾರ ಹೆಸರನ್ನೂ ಹೇಳುವುದಕ್ಕೆ ಹೋಗುವುದಿಲ್ಲ. ಅದು ತಪ್ಪಾಗುತ್ತದೆಂದು ಒಂದು ಕಡೆ ಹೇಳುತ್ತಾರೆ. ಇನ್ನೊಂದು ಕಡೆ ಅದನ್ನು ಲೂಟಿ ಮಾಡಿದ್ದಾರೆಂದು ಎಲ್ಲರ ಹೆಸರನ್ನೂ ಹೇಳುತ್ತಾರೆ. ಇದು ನನಗೆ ಅರ್ಥವಾಗಲಿಲ್ಲ. ಅದಕ್ಕಾಗಿ ನನ್ನ ಮನಸ್ಸಿಗೆ ಏನು ಬಂತು ಎಂದರೆ, ಈಗ ಬಹಳ ಮಂತ್ರಿಗಳ ಹುದ್ದೆ ಖಾಲಿ ಇವೆ. ಅಲ್ಪಸಂಖ್ಯಾತರರು ಇರುವವರು ಯಾರೂ ಇಲ್ಲ. ಮಂತ್ರಿ ಹುದ್ದೆಗೆ ಏನಾದರೂ

ಅರ್ಜಿ ಹಾಕುವುದಕ್ಕೋಸ್ಕರ ಈ ವರದಿಯನ್ನು ಕೊಟ್ಟಿದ್ದಾರೆಯೇ ಎನ್ನುವ ಅನುಮಾನ ನನಗೆ ಬಂತು.

ಶ್ರೀ ಸಿ.ಟಿ. ರವಿ :– ಮಾನ್ಯ ಅಧ್ಯಕ್ಷರೆ, ವಿಷಯಾಂತರ ಮಾಡುತ್ತಿದ್ದಾರೆ. ಅವರು ಪ್ರಾಮಾಣಿಕತೆಗಿಂತ, ತಮ್ಮ ವಕೀಲ .....

(ಗೊಂದಲ)

ಶ್ರೀ ಸಿ.ಟಿ. ರವಿ :– ಮಾನ್ಯ ಅಧ್ಯಕ್ಷರೆ, ಯಾರು ತಪ್ಪು ಮಾಡಿದ್ದಾರೆ ಅವರಿಗೆ ಶಿಕ್ಷೆಯಾಗಲಿ. ವರದಿಯನ್ನು ಕೊಟ್ಟಿರುವುದೇ ಅಪರಾಧ ಎನ್ನುವ ಭಾವನೆಯಲ್ಲಿ ಇವರು ಮಾತನಾಡುತ್ತಿದ್ದಾರೆ. ಇದು ಸರಿಯಾದುದು ಅಲ್ಲ.

(ಗೊಂದಲ)

ಶ್ರೀ ಸಿದ್ದು ಸವದಿ :– ಲೂಟಿ ಹೊಡೆದಿರುವುದನ್ನು ಸಮರ್ಥನೆ ಮಾಡಿಕೊಳ್ಳುತ್ತಿದ್ದೀರಿ.

(ಗೊಂದಲ)

ಶ್ರೀ ಬಿ.ಜಡ್. ಜಮೀರ್ ಅಹ್ಮದ್ ಖಾನ್ :– ಮಾನ್ಯ ಅಧ್ಯಕ್ಷರೆ, ಇದರ ಸತ್ಯಾಂಶ ಹೊರಗೆ ಬರಬೇಕು

(ಗೊಂದಲ)

ಅಧ್ಯಕ್ಷರು :– ದಯಮಾಡಿ ತಾವು ಕುಳಿತುಕೊಳ್ಳಿ. ಹಾಗೆ ಎದ್ದು ನಿಂತುಕೊಂಡು ಮಾತನಾಡಿದರೆ ಹೇಗೆ?

ಶ್ರೀ ಸಿ.ಟಿ. ರವಿ :– ಮಾನ್ಯ ಅಧ್ಯಕ್ಷರೆ, ನಾನು ಟಿ.ವಿ. ನೋಡಿದ್ದೇನೆ. ಯಾರ ಹೆಸರನ್ನೂ ನಿರ್ದಿಷ್ಟವಾಗಿ ಹೇಳಿಲ್ಲ.

ಶ್ರೀ ಟಿ.ಬಿ. ಜಯಚಂದ್ರ :– ಇದು ಪತ್ರಿಕೆಗಳಲ್ಲಿ ಬಂದಿದೆ.

ಶ್ರೀ ಸಿ.ಟಿ. ರವಿ :– ಪೇಪರ್‌ನಲ್ಲಿ ಬಂದಿದೆ. ಸತ್ಯಾಸತ್ಯತೆ ಬಗ್ಗೆ ತನಿಖೆಯಾಗಲಿ.

ಶ್ರೀ ಬಂಡೆಪ್ಪ ಖಾಶೆಂಪೂರ :– ಮಾನ್ಯ ಅಧ್ಯಕ್ಷರೆ, ಒಂದು ಕಡೆ ಸಬ್‌ಮಿಟ್ ಮಾಡಿದ್ದೇವೆಂದು ಹೇಳುತ್ತಾರೆ, ಇನ್ನೊಂದು ಕಡೆ ಅದು ಏನೋ ಮಂತ್ರಿಯಾಗುವುದಕ್ಕೆ manipulated ಎಂದು ಹೇಳುತ್ತಾರೆ. Minority Commission is a statutory body, ಆದ್ದರಿಂದ ಅವರು accept ಮಾಡಬೇಕಾಗುತ್ತದೆ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ :– ಮಾನ್ಯ ಅಧ್ಯಕ್ಷರೆ, ಅವರು ತಮ್ಮ ಸ್ವಾರ್ಥಕ್ಕೋಸ್ಕರ ದುರುಪಯೋಗ ಮಾಡಿಕೊಂಡಿದ್ದರೆ ಅವರಿಗೂ ಕೂಡ ಶಿಕ್ಷೆಯಾಗಬೇಕಾಗುತ್ತದೆ. ಈಗಾಗಲೇ ಇದು ಮಾಧ್ಯಮಗಳಲ್ಲಿ ಬಂದಿದೆ. ಎಲ್ಲಾ

ಅಲ್ಪಸಂಖ್ಯಾತರ ಮುಖಂಡರನ್ನು ಅನುಮಾನದಿಂದ ನೋಡತಕ್ಕಂತಹ ವ್ಯವಸ್ಥೆಯಾಗಿರುವ ಹಿನ್ನೆಲೆಯಲ್ಲಿ ಇದರ ಬಗ್ಗೆ ಸರ್ಕಾರದ ತೀರ್ಮಾನ ಏನು? ಮುಖ್ಯಮಂತ್ರಿಗಳು ಮತ್ತು ಸಚಿವ ಸಂಪುಟದ ತೀರ್ಮಾನ ಏನು ಎಂಬ ಒಕ್ಕಣೆಯೊಂದಿಗೆ ಇದು ಸದನದ ಮುಂದೆ ಮಂಡನೆಯಾಗಬೇಕು. ಇದರ ಬಗ್ಗೆ ವ್ಯಾಪಕವಾದಂತಹ ಚರ್ಚೆಯಾಗಬೇಕು. ಆ ಚರ್ಚೆಯಲ್ಲಿ ನಾವುಗಳು ಭಾಗವಹಿಸುವುದಕ್ಕೆ ಸಿದ್ಧರಿದ್ದೇವೆ. ಇದರಲ್ಲಿ ಯಾರು ತಪ್ಪಿತಸ್ಥರು ಇದ್ದಾರೆ, ಅವರಿಗೆ ಶಿಕ್ಷೆ ಆಗಲೇಬೇಕು. ಇದರಲ್ಲಿ ಹೆಚ್ಚು ಕಡಿಮೆಯಾದರೆ ಇದಕ್ಕೆ ಯಾರು ಜವಾಬ್ದಾರರು? ಸರ್ಕಾರವು ಅಷ್ಟೇ ಜವಾಬ್ದಾರರಾಗಬೇಕಾಗುತ್ತದೆ ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಅವರ ಅವಧಿ ಮುಕ್ತಾಯವಾಗಿದೆ ಎಂದು ನನಗೆ ಯಾರೋ ಹೇಳುತ್ತಿದ್ದರು. ಅದಕ್ಕಾಗಿ ಈ ಬಗ್ಗೆ ಅನುಮಾನಗಳು ಬಂದಿರುವಂತಹ ಹಿನ್ನೆಲೆಯಲ್ಲಿ ದಯಮಾಡಿ ಇದರ ಬಗ್ಗೆ ಸರ್ಕಾರವು ಸಚಿವ ಸಂಪುಟದ ಒಪ್ಪಿಗೆಯನ್ನು ಪಡೆಯುತ್ತೀರಾ? ಇವತ್ತು ಇದರ ಬಗ್ಗೆ ಅಧಿಕಾರಿಗಳು ಪರಿಶೀಲನೆಯನ್ನು ಮಾಡುತ್ತಾರಾ? ಅದಕ್ಕೆ ಒಪ್ಪಿಗೆಯನ್ನು ಪಡೆಯುತ್ತಾರಾ? ಅದರ ಸಾಧಕ ಬಾಧಕಗಳನ್ನು ಹೇಳುತ್ತಾರೆ. ಇದರ ಬಗ್ಗೆ ತಮ್ಮ ಶಿಫಾರಸ್ಸು ಏನು? ಇದರಲ್ಲಿ ತಮ್ಮ ತೀರ್ಮಾನ ಏನೆಂದು ಹೇಳಿ ಈ ವರದಿಯನ್ನು ಸದನದ ಮುಂದೆ ಮಂಡಿಸಬೇಕು. ಕೇವಲ ಎರಡು ಮತ್ತು ಮೂರು ದಿವಸಗಳಲ್ಲಿ ಅಥವಾ ಒಂದು ವಾರದಲ್ಲಿಯಾದರೂ ಕೂಡ ಮಂಡಿಸುವಂತಹ ಕೆಲಸವನ್ನು ತಾವು ಮಾಡಬೇಕು. ಇದು ಬಹಳ ದಿವಸಗಳಿಂದ ಈ ಬಗ್ಗೆ ಪತ್ರಿಕೆಯಲ್ಲಿ ಬರುತ್ತಿರುವುದು ಮತ್ತು ಟೀಕೆಯನ್ನು ಮಾಡುತ್ತಿರುವುದು ಆಗುತ್ತಿದೆ. ಅವರುಗಳ ಕ್ಷೇತ್ರದಲ್ಲಿ ಅವರು ಕೆಲಸವನ್ನು ಮಾಡುವುದಕ್ಕೆ ಕಷ್ಟವಾಗುತ್ತದೆ. ಇದರಲ್ಲಿ ತಪ್ಪಾಗಿದ್ದರೆ ಅವರ ಹಕ್ಕಿನ ಚ್ಯುತಿಯಾಗುತ್ತದೆ. ಅವರ ಹಕ್ಕು ಮತ್ತು ಮರ್ಯಾದೆಯನ್ನು ಕಾಪಾಡುವಂತಹ ಜವಾಬ್ದಾರಿ ಈ ಪೀಠದಿಂದ ಆಗಬೇಕಾಗುತ್ತದೆ. ಆ ಕಾರಣದಿಂದ ಆದಷ್ಟು ಬೇಗ ಇದನ್ನು ಮಂಡನೆ ಮಾಡಬೇಕು. ಇದರ ಬಗ್ಗೆ ಸರ್ಕಾರದ ಶಿಫಾರಸ್ಸು ಏನು ಎಂದು ಸಹ ಮಂಡನೆ ಮಾಡಬೇಕಾಗಿದೆ.

ಅಧ್ಯಕ್ಷರು :– You have already submitted.

ಶ್ರೀ ಸಿ.ಟಿ. ರವಿ :– ಮಾನ್ಯ ಅಧ್ಯಕ್ಷರೆ, ಈ ಬಗ್ಗೆ ಸಿಬಿಐ ತನಿಖೆಯೂ ಬೇಡ ಲೋಕಾಯುಕ್ತ ತನಿಖೆಯು ಬೇಡ; ಈ ಬಗ್ಗೆ ಮಂಪರು ಪರೀಕ್ಷೆಗೆ ಹಾಕಿ ಬಿಡಿ.

ಶ್ರೀ ತನ್ವೀರ್ ಸೇಠ್ (ನರಸಿಂಹರಾಜ) :– ಸನ್ಮಾನ್ಯ ಅಧ್ಯಕ್ಷರೆ, ಮಾಧ್ಯಮದ ಮೂಲಕ ಬಂದಂತಹ ವರ್ತಮಾನಗಳಿಂದ ನಮ್ಮೆಲ್ಲರ ಹೆಸರುಗಳು

ಕೂಡ ಇದರಲ್ಲಿ ಸೇರಿದೆ. ಇದರಲ್ಲಿ ಹೆಸರುಗಳು ಸೇರಿರುವ ಬಗ್ಗೆ ಮಾಧ್ಯಮದಲ್ಲಿ ನೋಡಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳ ಹತ್ತಿರವೇ ವಕ್ಫ್ ಖಾತೆ ಇರುವುದರಿಂದ ನಮ್ಮ ಅಲ್ಪಸಂಖ್ಯಾತರ ಆಯೋಗದವರು ಶಿಫಾರಸ್ಸನ್ನು ಮಾಡಬೇಕಾದರೆ ಒಂದು ವರದಿಯನ್ನು ಮಂಡಿಸಬೇಕಾದರೆ ಅದನ್ನು ಎರಡೂ ಸದನಗಳಲ್ಲೂ ಸಹ ಮಂಡಿಸಬೇಕು. ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಏನು ಆ ಪ್ರತಿಗಳು ಇವೆ, ಅದನ್ನು ಯಾವಾಗ ಮಂಡನೆ ಮಾಡುತ್ತಾರೆ, ಅದನ್ನು ಮಂಡನೆ ಮಾಡಿದ ಮೇಲೆ ಅದು ಈ ಸದನದ ಸ್ವತ್ತಾಗುತ್ತದೆ. ಈಗ ಇಲ್ಲಿ ಚರ್ಚೆಯಾಗುತ್ತಿರುವುದು ಇದನ್ನು ಯಾರು ಬಹಿರಂಗಪಡಿಸಿದ್ದಾರೆ ಎಂಬುದು ಒಂದು ಕಡೆ ಇರಲಿ. ಆದರೆ ಇಲ್ಲಿ ನಾವು ಹೇಳುವಂತಹದ್ದು, ಇದರಲ್ಲಿ ಯಾರೇ ಇರಲಿ ನಿರ್ದಾಕ್ಷಿಣ್ಯವಾಗಿ ತಪ್ಪು ಮಾಡಿರುವವರು ಶಿಕ್ಷೆಯನ್ನು ಅನುಭವಿಸಬೇಕು. ಮಾನ್ಯ ಮುಖ್ಯಮಂತ್ರಿಗಳೂ ಸ್ವತಃ ಇದರ ಬಗ್ಗೆ ಯಾವ ರೀತಿಯಾದ ತನಿಖೆಯು ಸೂಕ್ತವೆನಿಸುತ್ತದೆ, ಆ ತನಿಖೆಯನ್ನು ಮಾಡಬೇಕಾಗುತ್ತದೆ. ಇವತ್ತು ಅಲ್ಪಸಂಖ್ಯಾತರ ಆಯೋಗವು ಮಾಡಿರುವಂತಹ ಕೆಲಸ, ಅದು ಅವರ jurisdiction ಗೆ ಬರುತ್ತದೆಯೋ ಇಲ್ಲವೋ ಎಂಬುದು ನಂತರದ ವಿಷಯ. ಅದರ ಬಗ್ಗೆ ಇಲ್ಲಿ ಚರ್ಚೆ ಮಾಡುವುದು ಬೇಡ. ಆದರೆ ಒಂದು ಸಂಸ್ಥೆ ಅದಕ್ಕೂ ಸಹ ಒಂದು ಪ್ರತ್ಯೇಕವಾದಂತಹ ಕಾನೂನು ಇದೆ, ಈ ಸಂಸ್ಥೆಗೂ ಕೂಡ ಒಂದು ಕಾನೂನು ಇದೆ. ಹಾಗಾಗಿ ಯಾರು ಯಾರ ಮೇಲೆ ಇಲ್ಲಿ ಹೇಳುವಂತಹ ಪ್ರಯತ್ನ ಮಾಡುತ್ತಿದ್ದಾರೆ ಅದರ ಬಗ್ಗೆ ನಂತರ ಚರ್ಚೆ ಮಾಡೋಣ. ಏನು ಈ ಒಂದು ವರದಿ ಬಹಿರಂಗವಾಗಿದೆ ಅದರಲ್ಲಿ ನನ್ನ ಹೆಸರು ಕೂಡಿದೆ ಮತ್ತು ಎಲ್ಲರ ಹೆಸರು ಕೂಡ ಇದೆ. ಸಾಕಷ್ಟು ಶಾಸಕರು ಮತ್ತು ನಾಯಕರು ಇವತ್ತು ನಿಧನರಾಗಿದ್ದಾರೆ. ಅಂತಹವರ ಹೆಸರುಗಳೂ ಸಹ ಈ ವರದಿಯಲ್ಲಿ ಸೇರಿದೆ. ಸರ್ಕಾರಕ್ಕೆ ಯಾವ ಪ್ರಕಾರದ ತನಿಖೆಯನ್ನು ಮಾಡುವುದು ಸೂಕ್ತವೆನಿಸುತ್ತದೆ, ಅದನ್ನು ನಾವು ಸ್ವಾಗತಿಸುವುದಕ್ಕೆ ತಯಾರಿದ್ದೇವೆ.

ಶ್ರೀ ಎನ್.ಎ. ಹ್ಯಾರೀಸ್ (ಶಾಂತಿನಗರ) :– ಮಾನ್ಯ ಸಭಾಧ್ಯಕ್ಷರೆ, ಈಗಾಗಲೇ ಎಲ್ಲಾ ಮಾನ್ಯ ಸದಸ್ಯರುಗಳು ಮಾತನಾಡಿದ್ದಾರೆ. ನಿಜವಾಗಲೂ ಈ ವರದಿಯನ್ನು ಶ್ರೀ ಅನ್ವರ್ ಮಾನ್ಪಾಡಿಯವರು ಕೊಟ್ಟಿದ್ದಾರೆ. ಇದು ಸರ್ಕಾರವನ್ನು ಕೇಳಿ ಮಾಡಿರುವುದೇ ಅಥವಾ ಅವರಷ್ಟಕ್ಕೆ ಅವರೇ ಮಾಡಿರುವುದೇ ಎಂದೂ ಕೂಡ ನಮಗೆ ಗೊತ್ತಿಲ್ಲ. ಇದರಲ್ಲಿ ಎರಡು ಲಕ್ಷ ಕೋಟಿ ರೂಪಾಯಿಗಳಷ್ಟು ಎಂದರೆ ಇದು 2 ಜಿ ಗಿಂತಲೂ ದೊಡ್ಡ ಹಗರಣವಾಯಿತು. ಇದರಲ್ಲಿ ಒಂದಿಂಚನ್ನೂ ನಾವು ಕೊಡುವುದಿಲ್ಲ, ಎಲ್ಲವನ್ನೂ

ವಕ್ಫ್ ಬೋರ್ಡಿಗೆ ತರುತ್ತೇವೆಂದು ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಟಿ.ವಿ.ಯಲ್ಲಿ statement ಅನ್ನು ಕೊಟ್ಟರು. ಈ ಒಂದು ಹೇಳಿಕೆಯನ್ನು ಮಾನ್ಯ ಮುಖ್ಯಮಂತ್ರಿಗಳು ಹೇಳಿರುವುದರಿಂದ ಇದನ್ನು ನಿಜವಾಗಿಯೂ ಮಾಡುವ ಹಾಗಿದ್ದರೆ ನಾವೂ ಕೂಡ ಅವರ ಜೊತೆಯಲ್ಲಿ ಅದರ ಬಗ್ಗೆ ಸಹಾಯ ಮತ್ತು ಸಹಕಾರವನ್ನು ಕೊಟ್ಟು ಈ ಬಗ್ಗೆ ನಾವು ಸ್ವಾಗತವನ್ನು ಮಾಡುತ್ತೇವೆ. ಏಕೆಂದರೆ ಇದು ನನ್ನ ಸಮುದಾಯಕ್ಕೆ ಹಾಗೂ ಬಡವರಿಗೆ ಸೇರಿರುವಂತಹದ್ದು ಆಗಿದೆ. ಇದನ್ನು ವಾಪಸ್ಸು ತರುವ ಬಗ್ಗೆ ನಾವೆಲ್ಲರೂ ಸಹ ಸೇರುತ್ತೇವೆ. ನೀವು ಈ ಬಗ್ಗೆ ತನಿಖೆಯನ್ನು ಮಾಡುವ ಬಗ್ಗೆ ನೀವು ಸಿಬಿಐಗೆ ಕೊಡುವುದಿಲ್ಲವೆಂದು ಮಾನ್ಯ ಸದಸ್ಯರಾದ ಶ್ರೀ ಜಮೀರ್ ಅಹಮದ್‌ಖಾನ್‌ರವರು ವಿಶೇಷವಾಗಿ ಹೇಳಿದರು. ನೀವು ಇದನ್ನು ಸಿಬಿಐಗೆ ಕೊಡಿ ಏಕೆಂದರೆ ಲೋಕಾಯುಕ್ತಕ್ಕೆ ಕೊಡುವುದಕ್ಕೆ ಬರುವುದಿಲ್ಲ. ಇಲ್ಲಿಯವರೆಗೂ ಕೂಡ ಬಿಜೆಪಿಯವರು ಸಿಬಿಐಗೆ ಕೊಟ್ಟಿಲ್ಲ. ಇದು ಆಗುವ ಹಾಗಿದ್ದರೆ ಸಿಬಿಐಗೆ ಕೊಡಿ. ಇದರಲ್ಲಿ ಯಾರು ತಪ್ಪಿತಸ್ಥರು ಇದ್ದಾರೆ ಅವರಿಗೆ ಖಂಡಿತವಾಗಿ ಶಿಕ್ಷೆಯಾಗಬೇಕು. ಇದರ ಜೊತೆಯಲ್ಲಿ ವರದಿಯನ್ನು ಕೊಟ್ಟಿರುವುದರಲ್ಲಿ ಕೂಡ ತಪ್ಪು ಇದ್ದರೆ ಕೂಡ ಅವರಿಗೂ ಸಹ ಶಿಕ್ಷೆಯಾಗಬೇಕಾಗುತ್ತದೆ. ಕರ್ನಾಟಕದಲ್ಲಿ ಮುಸ್ಲಿಂ ಲೀಡರ್ಸ್ ಯಾರು ಇದ್ದಾರೆ ಅವರ ಯಾರ ಹೆಸರನ್ನೂ ಇದರಲ್ಲಿ ಇವರು ಬಿಟ್ಟಿಲ್ಲ. ಇದರಲ್ಲಿ ಎಲ್ಲರ ಹೆಸರನ್ನೂ ಸಹ ಹಾಕಿದ್ದಾರೆ. ಇಲ್ಲಿ ಯಾವ ಲೀಡರ್ ಅನ್ನೂ ಸಹ ಬಿಟ್ಟಿರುವುದಿಲ್ಲ.

ಶ್ರೀ ಬಿ.ಜಡ್. ಜಮೀರ್ ಅಹ್ಮದ್ ಖಾನ್ :– ಇದರಲ್ಲಿ ಮಮ್ತಾಜ್ ಅಲಿ ಖಾನ್‌ರವರ ಹೆಸರು ಇಲ್ಲ. ಏಕೆಂದರೆ he is from BJP.

ಶ್ರೀ ಎನ್.ಎ. ಹ್ಯಾರೀಸ್ :– ಇದರಲ್ಲಿ ಬಿಜೆಪಿ ಸರ್ಕಾರದಲ್ಲಿದ್ದವರ ಹೆಸರು ಇಲ್ಲ. ಇದರಲ್ಲಿ ಅವರನ್ನು ಮುಸ್ಲಿಂ ಎಂದು ಮಾಡಿದ್ದಾರೊ ಅಥವಾ ಬೇರೆ ಏನೆಂದು ಮಾಡಿದ್ದಾರೆಂದು ನಮಗೆ ಗೊತ್ತಾಗುತ್ತಿಲ್ಲ. ದಯವಿಟ್ಟು ಮಾನ್ಯ ಮುಖ್ಯಮಂತ್ರಿಗಳು ಇದನ್ನು ಯಾವ ರೀತಿಯಾಗಿ ತೆಗೆದುಕೊಂಡು ಹೋಗುತ್ತಾರೆಂದು ಇದರ ಬಗ್ಗೆ ಹೇಳಬೇಕು. ಏಕೆಂದರೆ ಮಾನ್ಯ ಅಧ್ಯಕ್ಷರೆ, ಮೀಡಿಯಾದಲ್ಲಿ ಎಲ್ಲರ ಹೆಸರುಗಳೂ ಸಹ ಬರುತ್ತಿದೆ. ಇಲ್ಲಿ ಮುಖ್ಯಮಂತ್ರಿಗಳು ಹೇಳುತ್ತಾರೆ ಅವರ ಹೆಸರನ್ನು ಹೇಳುತ್ತಿಲ್ಲ. ಅನ್ವರ್ ಮಾನ್ಪಾಡಿಯವರು ಹೆಸರು ಹೇಳಲಿಲ್ಲ ಎಂದು ಹೇಳುತ್ತಾರೆ. ಹೆಸರು ಎಲ್ಲಿಂದ ಬಂತು? ಇದನ್ನು ಒಂದು political issue ಆಗಿ ಮಾಡುತ್ತಿದ್ದಾರಾ ಎಂದು ನಾವು ಆಲೋಚನೆಯನ್ನು ಮಾಡಬೇಕಾಗಿದೆ. ಈಗಾಗಲೇ ಬಿಜೆಪಿಯ ಎಲ್ಲಾ ಮಂತ್ರಿಗಳದ್ದು, ಎಲ್ಲರದ್ದೂ ಆಯಿತು. ಈಗ ಇದರಲ್ಲಿ ನಮ್ಮನ್ನು ಸೇರಿಸುವಂತಹ ಪ್ರಯತ್ನನಾ ಇದು? ಆ

ತರಹ ಏನಾದರೂ ಇದ್ದರೆ ನೀವು ಸಿಬಿಐಗೆ ಕೊಡಿ. ಮಾನ್ಯ ರವಿಯವರೆ, ನಿಮ್ಮದು ಯಾವುದನ್ನೂ ಸಹ ಇಲ್ಲಿ ಸಿ.ಬಿ.ಐ.ಗೆ ಕೊಟ್ಟಿರುವುದಿಲ್ಲ. ನೀವು ಇದನ್ನು ದಯವಿಟ್ಟು ಸಿಬಿಐಗೆ ಕೊಡಿಸಿ

ಅಧ್ಯಕ್ಷರು : – ಆಯಿತು.

Sri, Syed Yasin (Raichur) :– ಸನ್ಮಾನ್ಯ ಸಭಾಧ್ಯಕ್ಷರೇ, I am happy, all learned, educated MLAs and Hon'ble Ministers, specially our Suresh kumar must be a ware of our Waqf Property Act. Waqf Act ನಲ್ಲಿ Waqf Property cannot be sold, this is the rule and it cannot be sold also. But it can be given on lease on rent basis, clearly it is there. It is already there. If somebody might have taken on the recommendation of some body and all, the colleges, some institutions whatever it is, they have given the rent. If they are not paying the rent, we have to issue the notice and they pay the rent. It is very simple. In wholesale he has taken the names of all the respected leaders, those who have contributed to the state. We may be new persons, but there are so many senior leaders. They have taken the names with a malafide intention. To take the merit and numbers from your government, he might, have made this commission report and it is totally wrong. Whether it is a National Minority Commission or the State Commission, the main objective, purpose and the formulation of the Minority Commission is to look after the socio-economic and educational upliftment of minorities. Poverty is there, instead of taking care of the poverty and all, he is digging the future and defaming the character of all MALs and all respected leaders. There is a huge work in respect of Socio-economic and Educational up-liftment of the Minorities and your Chairman has given a very good opportunity from your government to take care of the Socio-Economic and Educational up-liftment of minorities. Education ಬಗ್ಗೆ, slums ನಲ್ಲಿ maximum ಇದೆ. School drop outs ದು ಇದೆ, only up to 4th Standard they have studied. They do not have scholarship and loan facilities. RBI direction is there that there should be some fixed quota. Now he should take care and he should take up

the issue with Banks. RBI direction ನಲ್ಲಿ minorities, SC/ST and Backwards classes ನವರಿಗೆ compulsorily educational loans ಕೊಡಬೇಕು ಎಂದು ಇದೆ. Upliftment is very important. ತಾವು ತಮ್ಮ ಸರ್ಕಾರದಲ್ಲಿ ಅವರಿಗೆ ಒಳ್ಳೆಯ ಅವಕಾಶ ಕೊಟ್ಟಿದ್ದೀರಿ instead of taking that, he is giving the abnormal report. It shows that your Chairman is abnormal.This is an abonormal report. He should assess or he should take the psychological or psychiatric treatment. This is not the way. How can he give this kind of filthy report? He has given the names in wholesale. Does he think that nobody is honest and all MLAs are culprits? According to the law, property cannot be sold, how people will get involved in that? Instead of doing all these, he should see the poverty alleviation and all these. Thank you very much.

(ಗೊಂದಲ)

ಶ್ರೀ ಯು.ಟಿ. ಖಾದರ್ :– ಮಾನ್ಯ ಅಧ್ಯಕ್ಷರೆ, ಒಂದೇ ಒಂದು ಅವಕಾಶ ಕೊಡಿ.

(ಗೊಂದಲ)

ಅಧ್ಯಕ್ಷರು :– ಎಲ್ಲರೂ ಈ ರೀತಿ ಎದ್ದು ನಿಂತರೆ ಹೇಗೆ? ಹೀಗೆ ಒಬ್ಬೊಬ್ಬರೆ 2–3 ಬಾರಿ ಎದ್ದು ನಿಂತರೆ ನಾವು ಏನು ಮಾಡಬೇಕು?

(ಗೊಂದಲ)

ಶ್ರೀ ಸಿದ್ದರಾಮಯ್ಯ :– ಪತ್ರಿಕೆ ಆಧಾರದ ಮೇಲೆ ಇಲ್ಲಿ ಚರ್ಚೆ ನಡೆಯುತ್ತಿದೆ. ಇಲ್ಲಿ ವರದಿ ಇಲ್ಲ. ಆ ವರದಿಯನ್ನು ಯಾವ ರೀತಿ ತಯಾರು ಮಾಡಿದ್ದಾರೆ ಎನ್ನುವುದು ನಮಗೆ ಗೊತ್ತಿಲ್ಲ. ರಾಷ್ಟ್ರಮಟ್ಟದಲ್ಲಿ Minority Commission ಇರುತ್ತದೆ, ರಾಜ್ಯ ಮಟ್ಟದಲ್ಲಿಯೂ ಇರುತ್ತದೆ. ಅದೇ ರೀತಿ SC/ST Commission ಕೂಡ ಇರುತ್ತದೆ, Backward Classes Commission ಕೂಡ ಇರುತ್ತದೆ. ಅವುಗಳಿಗೆ ಏನು ಮಾಡಬೇಕೆಂದು ನಿರ್ದಿಷ್ಟವಾದಂತಹ ಜವಾಬ್ದಾರಿಗಳು ಇರುತ್ತವೆ. ಮಾನ್ಯ ಯಾಸೀನ್‌ರವರು ಹೇಳಿದಂತಹ ರೀತಿಯಲ್ಲಿ Upliftment of the Backward Community, Scheduled Caste and Minorities, welfare of those communities, *oppressed depressed* communities ಇವು ಇರುತ್ತವೆ. ನಿನ್ನೆ ಅನ್ವರ್ ಮಾನ್ಪಾಡಿಯವರು ಒಂದು ರಿಪೋರ್ಟ್ ಕೊಟ್ಟಿದ್ದಾರೆ ಎಂದು ನಾವು ಪತ್ರಿಕೆಗಳಲೆಲ್ಲಾ ಓದಿದ್ದೇವೆ. 2 ಲಕ್ಷ ಕೋಟಿ ರೂಪಾಯಿಗಳ ವಕ್ಫ್ property

ಯನ್ನು ಇಂಥಿಂಥವರು ನುಂಗಿದ್ದಾರೆ ಎಂದು ಪತ್ರಿಕೆಗಳಲ್ಲಿ ದೊಡ್ಡದಾಗಿ ಪ್ರಚಾರವಾಗಿದೆ. They are indicted. ಆ indict ಮಾಡಬೇಕಾದರೆ proper enquiry has to be conducted. I do not know what machinery he had to conduct the enquiry. How he collected the evidence? How he came to the conclusion like this? There is a law for all these things. I do not know, but anyway ಈಗ ಬಂದಿದೆ, ಪಾಪ ಅವರಿಗೆಲ್ಲಾ character assassination ಆಗುತ್ತಿದೆ. ಅವರು ಮಾಡಿದ್ದಾರೋ ಇಲ್ಲವೋ ಎನ್ನುವುದು ನಮಗೂ ಗೊತ್ತಿಲ್ಲ. ಅವರಿಗೂ ಗೊತ್ತಿಲ್ಲ, ಸರ್ಕಾರಕ್ಕೂ ಕೂಡ ಗೊತ್ತಿಲ್ಲ. ಆ report ಕೊಟ್ಟ ತಕ್ಷಣವೇ they are all indicted, culprits ಎಂದು ನಾವು ಹೇಳುವುದಕ್ಕೆ ಬರುವುದಿಲ್ಲ. That is why I am telling ಆ report ಅನ್ನು ಸದನದ ಮುಂದೆ ಇಡಲಿ. ಚರ್ಚೆ ಮಾಡೋಣ. ಅಲ್ಲಿ ಗುರುತರವಾದಂತಹ ಸಾಕ್ಷಿಗಳನ್ನೆಲ್ಲಾ collect ಮಾಡಿದರೆ let it be referred to C.B.I. ಅದನ್ನು C.B.I.ಗೆ ಕೊಡೋಣ. ಸರ್ಕಾರ ಒಪ್ಪಿಕೊಳ್ಳಲಿ. ಬೇರೆಯವುಗಳಿಗೆ ಸರ್ಕಾರ ಒಪ್ಪಿಕೊಳ್ಳುವುದಿಲ್ಲ. ಅವರ ಕೈಯಲ್ಲಿ ಒಪ್ಪಿಸುತ್ತೇನೆ.

(ಗೊಂದಲ)

ಶ್ರೀ ಸೈಯದ್ ಯಾಸೀನ್ : – The question will not arise for the enquiry at all. It is an abnormal report. The abnormal report, even CBI also will not accept.

(ಗೊಂದಲ)

ಅಧ್ಯಕ್ಷರು :– ಇನ್ನೂ Report ಸದನದ ಮುಂದೆ ಇಲ್ಲ.

ಶ್ರೀ ಸಿದ್ದರಾಮಯ್ಯ:– ತಾವು ಇದರ ಬಗ್ಗೆ ಚರ್ಚೆ ನಡೆಸುತ್ತಿದ್ದೀರಲ್ಲಾ, ಈಗ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುತ್ತೇನೆ ಎಂದು ಹೇಳುತ್ತಿದ್ದಾರಲ್ಲಾ?

ಅಧ್ಯಕ್ಷರು :– ಅವರ ಅನಿಸಿಕೆಗಳನ್ನು ಹೇಳಿದ್ದಾರೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ :– ಈಗ ಮಾನ್ಯ ಸಿ.ಟಿ. ರವಿಯವರು ಪ್ರಸ್ತಾಪ ಮಾಡಿದ್ದಾರೆ, on the basis of the report of the newspaper.

(ಗೊಂದಲ)

ಅಧ್ಯಕ್ಷರು :– Zero hour ನಲ್ಲಿ ಪ್ರಸ್ತಾಪ ಮಾಡಿದ್ದರು.

(ಗೊಂದಲ)

ಶ್ರೀ ಸಿದ್ದರಾಮಯ್ಯ :– ಅದನ್ನೇ ನಾನು ಹೇಳಿದ್ದು. You have allowed. Many people have spoken. ಅದರ ಅರ್ಥವೇನು? ಎಲ್ಲಾ ರೆಕಾರ್ಡ್‌ಗೆ ಹೋಗಲಿಲ್ಲವೇ? It has become the property of the House. ಯಾರ್ಯಾರದ್ದು ಹೆಸರು ಬಂದಿದೆ? C.T. Ravi whether it is with good intention or bad intention, I do not now, raise ಮಾಡಿದ್ದಾರೆ. Whether it is politically motivated or not I do not know.

ಅಧ್ಯಕ್ಷರು :– ಮಾನ್ಯ ರೇವಣ್ಣನವರೂ ಮಾಡಿದ್ದಾರೆ.

ಶ್ರೀ ಸಿದ್ದರಾಮಯ್ಯ :– Nobody knows that whether it is with mala fide intention or bona fide intention. Let the report be placed on the floor of the House. We will also go through it, we will also participate in the discussion, ಆಮೇಲೆ ಸರ್ಕಾರ ಉತ್ತರ ಕೊಡಲಿ. ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆಯೋ ನೋಡಿ House ಏನು ಹೇಳುತ್ತದೆಯೋ ಅದರ ಮೇಲೆ ಸರ್ಕಾರ ಕ್ರಮ ತೆಗೆದುಕೊಳ್ಳಲಿ.

ಶ್ರೀ ವಿ. ಶ್ರೀನಿವಾಸ ಪ್ರಸಾದ್ : – ಮಾನ್ಯ ಅಧ್ಯಕ್ಷರೆ,....

(ಗೊಂದಲ)

ಅಧ್ಯಕ್ಷರು:– ದಯವಿಟ್ಟು ಕುಳಿತುಕೊಳ್ಳಿ. ತಮಗೆ ಅವಕಾಶ ನೀಡಿಲ್ಲ. I will say nothing will go on record. ಇದು zero hour ನಲ್ಲಿ ಮಾಡಿರುವ ವಿಚಾರ, ತಾವು senior ಇದ್ದೀರಿ ಹೀಗೆ ಮಾತನಾಡುತ್ತಿದ್ದರೆ ಹೇಗೆ? ಇಲ್ಲ, ಅವಕಾಶ ನೀಡಿಲ್ಲ.

(ಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ದಾಖಲು ಮಾಡಿಲ್ಲ.)

(ಗೊಂದಲ)

ಶ್ರೀ ವಿ. ಶ್ರೀನಿವಾಸ್ ಪ್ರಸಾದ್:– ಇದು ಆಘಾತದ ಸುದ್ದಿಯಾಗಿದೆ.

ಅಧ್ಯಕ್ಷರು :– ಇದು ಆಘಾತದ ಸುದ್ದಿಯಾಗಿರಬಹುದು.

(ಗೊಂದಲ)

ಶ್ರೀ ಯು. ಟಿ. ಖಾದರ್ :– ಮಾನ್ಯ ಅಧ್ಯಕ್ಷರೆ...

(ಗೊಂದಲ)

ಶ್ರೀ ವಿ. ಶ್ರೀನಿವಾಸ್ ಪ್ರಸಾದ್ :– Just listen.

(ಗೊಂದಲ)

ಅಧ್ಯಕ್ಷರು :– ಮಾನ್ಯ ಖಾದರ್‌ರವರು ಎರಡು ನಿಮಿಷ ಮಾತನಾಡಿದ ಮೇಲೆ ತಾವು ಮಾತನಾಡಿ.

(ಗೊಂದಲ)

ಶ್ರೀ ವಿ. ಶ್ರೀನಿವಾಸ್ ಪ್ರಸಾದ್ :– Please listen.

ಶ್ರೀ ಎಸ್. ಸುರೇಶ್‌ಕುಮಾರ್ :– ಅವರು ಮಾತನಾಡಲಿ, ಅವಕಾಶ ಕೊಡಿ.

ಅಧ್ಯಕ್ಷರು :– ಆಯಿತು, ಮಾತನಾಡಿ.

ಶ್ರೀ ವಿ. ಶ್ರೀನಿವಾಸ್ ಪ್ರಸಾದ್ (ನಂಜನಗೂಡು):– ಎಂತಹ ಸುದ್ದಿಯಾಗಿದೆ. ಇವತ್ತು ಏನಾಗಿದೆ ಎನ್ನುವ ವಿಷಯವನ್ನು ತಾವು ಅರ್ಥ ಮಾಡಿಕೊಳ್ಳಬೇಕು. ನಿನ್ನೆ Electronic Media ದಲ್ಲೂ ಬಂದಿದೆ. ಇವತ್ತು news media ದಲ್ಲೂ ಯಾವ ರೀತಿ ಸುದ್ದಿಯಾಗಿದೆ ಎಂದು ತಾವು ಅರ್ಥ ಮಾಡಿಕೊಳ್ಳಬೇಕು. ಬಹುಶಃ ಕೇಂದ್ರದಲ್ಲಿ ಆದಂತಹ 2G Spectrum ಎಂತಹ ಅಲ್ಲೋಲ ಕಲ್ಲೋಲ ಆಯಿತು. ಇವತ್ತು ಹೇಳಿರತಕ್ಕಂಥದ್ದು ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿರತಕ್ಕಂಥದ್ದು. ಇವತ್ತು ರಾಜ್ಯ ಆಯೋಗದ ಅಧ್ಯಕ್ಷರು ಒಂದು ವರದಿಯನ್ನು ಕೊಟ್ಟಿದ್ದಾರೆ. The ball is in Chief Minister's court ಮಾನ್ಯ ಸಿದ್ದರಾಮಯ್ಯನವರು ಹೇಳುತ್ತಿದ್ದಾರೆ, ತಾವು ತೀರ್ಮಾನವನ್ನು ತೆಗೆದುಕೊಳ್ಳಬೇಕು. ವರದಿ ನಿಮ್ಮ ಕೈಗೆ ಸಿಕ್ಕಿದ ತಕ್ಷಣ ನಿಮಗೂ ಶಾಕ್ ಆಗಿದೆ ಎಂದು ನಿನ್ನೆಯೇ ತಾವು ಹೇಳಿದ್ದೀರಿ. ಕಠಿಣವಾದ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಇಡೀ ಕರ್ನಾಟಕದಲ್ಲಿ ಒಂದು ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿರತಕ್ಕಂಥ 5 ಲಕ್ಷ ಕೋಟಿ ಆಸ್ತಿಯಲ್ಲಿ 2 ಲಕ್ಷ ಕೋಟಿಯಷ್ಟು ದುರುಪಯೋಗವಾಗಿದೆ. ಇಲ್ಲಿ 38 ಜನ ಪ್ರಮುಖರ ಹೆಸರುಗಳು ಬಂದಿದೆ ಎನ್ನುವುದನ್ನು ಅರ್ಥ ಮಾಡಿಕೊಳ್ಳಬೇಕು. ಕೇವಲ ಅಲ್ಪಸಂಖ್ಯಾತ ಸಮುದಾಯದವರದ್ದು ಅಲ್ಲ, ಈ ಸದನದಲ್ಲಿರುವಂಥ ಸದಸ್ಯರು ಮಾತ್ರ ಅಲ್ಲ, ಪಾಪ ಎಲ್ಲರ ಮನಸ್ಸಿಗೆ ನೋವಾಗಿದೆ. ಎಲ್ಲರೂ ಕೂಡ ಅವರ ಮನಸ್ಸಿನಲ್ಲಿರುವ ವೇದನೆಗಳನ್ನು ಇಲ್ಲಿ ವ್ಯಕ್ತಪಡಿಸಿದ್ದಾರೆ. ಈ ಸದನದ ಹೊರಗಡೆ ಇರುವವರೂ ಕೂಡ ದೊಡ್ಡ ದೊಡ್ಡ ರಾಜಕೀಯ ಪ್ರಮುಖರು ಅಷ್ಟೇ ಅಲ್ಲ. ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿರದೇ ಇರುವ ಮಾಜಿ ಮುಖ್ಯಮಂತ್ರಿಗಳು, ಹಾಲಿ ಕೇಂದ್ರದಲ್ಲಿ ಮಂತ್ರಿಗಳಾಗಿರತಕ್ಕಂಥವರು ಕೂಡ ಇದರಲ್ಲಿ ಭಾಗಿಯಾಗಿದ್ದಾರೆ ಎಂದು ಬಂದಿದೆ. ಇದನ್ನು ತಾವು ಅರ್ಥ ಮಾಡಿಕೊಳ್ಳಬೇಕು. ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರದೇ ಇರತಕ್ಕಂಥವರು, ಇವತ್ತು ಸಂಸತ್

ಸದಸ್ಯರಾಗಿರತಕ್ಕಂಥವರು, ಮಾಜಿ ಮುಖ್ಯಮಂತ್ರಿಗಳ ಹೆಸರೂ ಕೂಡ ಇದೆ. ಕೇಂದ್ರ ಸರ್ಕಾರದಲ್ಲಿ ಸಚಿವರಾಗಿರತಕ್ಕಂಥವರ ಹೆಸರುಗಳೂ ಕೂಡ ಇದೆ. 38 ಜನರ ಹೆಸರುಗಳು ಇವೆ. ನಿವೃತ್ತ I.A.S ಅಧಿಕಾರಿಗಳ ಹೆಸರು ಇವೆ. ಹಾಗಾಗಿ ತಾವು ಯೋಚನೆ ಮಾಡಬೇಕು. ಇದರ ಬಗ್ಗೆ ಸುಮಾರು 1000 ಪುಟಗಳಿಗಿಂತಲೂ ಹೆಚ್ಚಿಗೆ ಕಮಿಷನ್ ವರದಿ ಬಂದಿದೆ. ಅವರು ವರದಿಯನ್ನು ಕೊಡಬೇಕಾದರೆ ಸುಮಾರು 1,800 ರಷ್ಟು ದೂರುಗಳು ಬಂದಿವೆ ಎನ್ನುವ ಆಧಾರದ ಮೇಲೆ ಇದನ್ನು ಸಂಪೂರ್ಣವಾದ ತನಿಖೆ ಮಾಡಿ ಆಯೋಗ ಇವತ್ತು ಒಂದು ವರದಿಯನ್ನು ಕೊಟ್ಟಿರುವಂಥದ್ದು. ಹಾಗಾಗಿ ನಾವು ಇದನ್ನು ಬಹಳ ತೀವ್ರವಾಗಿ ತೆಗೆದುಕೊಳ್ಳಬೇಕಾಗಿರುವಂಥದ್ದು. ಇದು ರಾಜ್ಯದ ಮರ್ಯಾದೆ ಪ್ರಶ್ನೆ ಕೂಡ ಆಗಿದೆ ಎನ್ನುವುದನ್ನು ತಾವು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಕೇವಲ ಅಲ್ಪಸಂಖ್ಯಾತ ಸಮುದಾಯದ ಪ್ರಶ್ನೆ ಅಲ್ಲ. ಅದರ ಜೊತೆ ಜೊತೆಯಲ್ಲಿ ಇಡೀ ನಮ್ಮ ರಾಜ್ಯದಲ್ಲಿ ಆಗಿರತಕ್ಕಂಥ ಒಂದು ದೊಡ್ಡ ಹಗರಣ ಎನ್ನುವ ರೀತಿಯಲ್ಲಿ ದೊಡ್ಡ ಆಪಾದನೆ ಇವತ್ತು ಆಯೋಗದ ಮುಖಾಂತರ ಬಂದಿದೆ. ಹಾಗಾಗಿ ಮುಖ್ಯಮಂತ್ರಿಗಳು ಇವತ್ತು ನಮ್ಮ ವಿರೋಧ ಪಕ್ಷದ ನಾಯಕರೂ ಕೂಡ ಹೇಳಿದ್ದಾರೆ. ಈ ಹಗರಣದಲ್ಲಿ ಯಾರ್ಯಾರ ಹೆಸರು ಇದೆ ಎನ್ನುವುದನ್ನು ಮುಕ್ತವಾಗಿ ಸದನದಲ್ಲಿ ಚರ್ಚೆ ಮಾಡಿ ಮಾತನಾಡುವಂತಹ ಸಂದರ್ಭದಲ್ಲಿ, ಯಾವುದೇ ರೀತಿಯಾದ ತನಿಖೆಗೂ ಕೂಡ ನಾವು ಸಿದ್ಧವೆಂದು ಹೇಳಿದ್ದಾರೆ. ಇದು ಸಾಧಾರಣವಲ್ಲ. ಎರಡು ಲಕ್ಷ ಕೋಟಿ ರೂಪಾಯಿ ದುರುಪಯೋಗ ಆಗಿರುವಂಥದ್ದು ಯಾವ ರೀತಿ ತನಿಖೆ ಮಾಡಬೇಕೆಂದು ತಮ್ಮ ವಿವೇಚನೆಯಿಂದ ಇವತ್ತು ಯೋಚನೆ ಮಾಡಿ ಅದನ್ನು ಸದನಕ್ಕೆ ಸರಿಯಾದ ರೀತಿಯಲ್ಲಿ ತಾವು ತಿಳಿಸಬೇಕೆಂದು ನಾನು ಕೂಡ ಕೇಳುತ್ತಿದ್ದೇನೆ.

ಶ್ರೀ ಯು.ಟಿ. ಖಾದರ್ (ಮಂಗಳೂರು):– ಮಾನ್ಯ ಅಧ್ಯಕ್ಷರೆ, ನಿನ್ನೆ ದಿನ ಆ ಸುದ್ದಿ ಟಿ.ವಿ. ಮತ್ತು ಇನ್ನಿತರ ಮಾಧ್ಯಮದಲ್ಲಿ ವಕ್ಫ್ ಪ್ರಾಪರ್ಟಿಯ ಬಗ್ಗೆ 2 ಲಕ್ಷ ಕೋಟಿ ರೂಪಾಯಿಗಳ ಅವ್ಯವಹಾರ ಆಗಿದೆ, ಅದರ ಆಸ್ತಿಯನ್ನು ಬೇರೆಯವರು ಲಪಟಾಯಿಸುತ್ತಿದ್ದಾರೆಂದು ಹೇಳಿಕೊಂಡು ಬಹುಶಃ ಅದರಲ್ಲಿ ಯಾರು ಇವತ್ತು ಸಮಾಜದಲ್ಲಿ ಬಹಳಷ್ಟು ವರ್ಷ ಈ ಸಮಾಜಕ್ಕೆ ಈ ಸಮುದಾಯಕ್ಕೆ, ಈ ರಾಜ್ಯಕ್ಕೆ ಸೇವೆಯನ್ನು ಸಲ್ಲಿಸಿದ್ದಾರೆ ಅವರ ಹೆಸರು ಕೂಡ ಇಲ್ಲಿ ಪ್ರಸ್ತಾಪವಾಗಿದೆ. ಇನ್ನು ಎರಡನೆಯದಾಗಿ ಹೇಳುವುದಾದರೆ, ಬಹುಶಃ ಇಲ್ಲಿಯ ತನಕ ಜನಸಾಮಾನ್ಯರಿಗೆ ಅಲ್ಪಸಂಖ್ಯಾತರಿಗೆ ಈ ಕಮಿಷನ್ ಉಂಟಾ, ಇಲ್ಲವಾ ಎಂದು ಕೆಲವರಿಗೆ ಗೊತ್ತಿರಲಿಲ್ಲ. ಇಷ್ಟೆಲ್ಲಾ ಸಮಸ್ಯೆಗಳು ಆಯಿತು, ಬೇರೆ ಬೇರೆ ಆವಾಂತರಗಳು ಆಯಿತು, ತೊಂದರೆಗಳು ಆಯಿತು ಎಲ್ಲಿಯೂ ಕೂಡ

ಈ ಕಮಿಷನ್‌ನಿಂದ ನ್ಯಾಯ ಕೊಡುವಂತಹ ವ್ಯವಸ್ಥೆಗಳು ಕೂಡ ಆಗಲಿಲ್ಲ. ಬಹುಶಃ ನಿನ್ನೆ ಕೂಡ ಕಮಿಷನ್ ಇದೆ ಎಂದು ಎಲ್ಲರಿಗೂ ಗೊತ್ತಾಗಿದೆ. ಬಹುಶಃ ಇಲ್ಲಿ ಪ್ರಶ್ನೆ ಏನೆಂದರೆ, ಇವತ್ತು ಎಲ್ಲರೂ ಕೂಡ ಈ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ ಯಾವುದೇ enquiry ಮಾಡಿ ಎಂದು ನಾವೆಲ್ಲರೂ ಕೂಡ ಸಿಬಿಐ ತನಿಖೆಗೆ ರೆಡಿಯಾಗಿ ತಯಾರಿದ್ದೇವೆ. ಈಗ ಇಲ್ಲಿ ಸತ್ಯ ಯಾವುದು, ಅಸತ್ಯ ಯಾವುದು ಎಂದು ಎಲ್ಲರಿಗೂ ಗೊತ್ತಾಗಬೇಕಾಗಿದೆ. ಈ ರೀತಿ ಯಾವುದೇ ಒಂದು ಕಮಿಷನ್ ಇರಲಿ, ಯಾವುದೋ ಒಂದು ಸಮಿತಿ ಇರಲಿ, ಸದನ ಸಮಿತಿ ಇರಲಿ ಅದು ಬರಿ ರಾಜ್ಯಕ್ಕೋಸ್ಕರವೇ? ಅಥವಾ ಇನ್ನಿತರ ಲಾಭಾಂಶವನ್ನು ಇಟ್ಟುಕೊಂಡು sycophancy ರೀತಿಯಲ್ಲಿ ಈ ರೀತಿಯಾದ ಒಂದು ತೀರ್ಮಾನವನ್ನು ಕೊಡುವಂತಹ ಅವಕಾಶ ಮುಂದೆಯಾದರೂ ಅದನ್ನು ನಿಲ್ಲಿಸುವಂತಹ ಅವಕಾಶ ಇದರ ಬಗ್ಗೆ ಕಠಿಣವಾದಂತಹ ಕ್ರಮವನ್ನು ನಮ್ಮ ಈ ಸದನವು ತೆಗೆದುಕೊಳ್ಳಬೇಕಾಗುತ್ತದೆ. ಬಹುಶಃ 10–15 ಜನ ನಮ್ಮ ಶಾಸಕರ ಹೆಸರನ್ನೂ ಕೂಡ ಇಲ್ಲಿ ಪ್ರಸ್ತಾಪವಾಗಿರುವುದರಿಂದ ಎಲ್ಲರಿಗೂ ಕೂಡ ಒಂದು ಕೆಟ್ಟ ಹೆಸರನ್ನು ತರುವಂತಹ ಅವಕಾಶವಿದೆ. ಇಲ್ಲಿ ಅಧಿಕಾರದಲ್ಲಿದ್ದವರೆಲ್ಲರೂ ಕೂಡ ಇವತ್ತು ಆ ಆಸ್ತಿಯನ್ನು ಕಬಳಿಸುವುದಕ್ಕೆ ಜನಪ್ರತಿನಿಧಿಗಳು ಇದ್ದಾರೆಂಬ ಭಾವನೆಯೂ ಕೂಡ ಬರುತ್ತದೆ. ಆದಕಾರಣ ಇವತ್ತು ಬಹುಶಃ ಸಿಬಿಐ ತನಿಖೆಗೆ ಕೇಳಿಕೊಳ್ಳುತ್ತಿದ್ದಾರೆ? ಈ ಒಂದು ವರದಿಯನ್ನು ಮಂಡಿಸಬೇಕು, ಇದರ ಬಗ್ಗೆ ಚರ್ಚೆಯಾಗಬೇಕು, ಇದನ್ನು ಸಿಬಿಐ ತನಿಖೆಗೆ ವಹಿಸಿಕೊಳ್ಳಬೇಕು. ಸಿಬಿಐ ತನಿಖೆಗೆ ಇದನ್ನು ಸರ್ಕಾರ ವಹಿಸಿಕೊಳ್ಳದಿದ್ದರೆ ಈ ಬಗ್ಗೆ ರಾಜ್ಯಾದ್ಯಂತ ಜನಾಂದೋಲನ ಮಾಡುವಂತಹ ಅವಕಾಶ ಮಾಡುತ್ತೇವೆಂದು ಹೇಳುವುದಕ್ಕೆ ನಾವು ಇಚ್ಛಿಸುತ್ತೇವೆ. ಏಕೆಂದರೆ, ಈ ವಕ್ಫ್ ಪ್ರಾಪರ್ಟಿಯ ಸಂಬಂಧ ಇದ್ದು ಸಿಬಿಐ ವಹಿಸಿಕೊಳ್ಳುವಂತಹದ್ದು ಆಗಬೇಕು. ಬಹುಶಃ ಇದರಲ್ಲಿ ಜನಸಾಮಾನ್ಯರನ್ನು ಸೇರಿಸಿಕೊಂಡು ಇದರ ಬಗ್ಗೆ ಹೋರಾಟ ಮಾಡುವಂತಹ ಸಂದರ್ಭದಲ್ಲಿ ಸಿಬಿಐ ತನಿಖೆಯನ್ನು ಮಾಡಿಸಬೇಕೆಂದು ಮತ್ತೆ ಮತ್ತೆ ಕೇಳಿಕೊಳ್ಳುತ್ತಾ ಏನಾದರೂ ವರದಿಯನ್ನು ಕೊಡುವುದರಲ್ಲಿ ಛೇರ್ಮನ್‌ರವರನ್ನು ರಾಜಕೀಯವಾಗಿ ಉಪಯೋಗ ಮಾಡಿಕೊಂಡು ಅವರು ಏನಾದರೂ ಸುಳ್ಳು ವರದಿಯನ್ನು ಕೊಟ್ಟು ತಪ್ಪಿತಸ್ಥರಾಗಿದ್ದರೆ ಅವರಿಗೂ ಸಹ ಕಠಿಣವಾದ ಶಿಕ್ಷೆಯನ್ನು ಕೊಡುವಂತಹ ವ್ಯವಸ್ಥೆಯನ್ನು ಬಹುಶಃ ತಾವು ಮಾಡಬೇಕೆಂದು ನಾನು ತಮ್ಮಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು) : – ಮಾನ್ಯ ಅಧ್ಯಕ್ಷರೆ, ಬಹಳ ಗಂಭೀರವಾದಂತಹ ಚರ್ಚೆಗಳು ಪ್ರಾಥಮಿಕ ಹಂತದಲ್ಲಿ ಇಲ್ಲಿ ನಡೆದಿದೆ.

ನಿನ್ನೆ ತಾನೆ, ಸುಮಾರು 24 ಗಂಟೆಗಳ ಹಿಂದೆ ಈ ವರದಿಯೂ ನನ್ನ ಕೈಸೇರಿದೆ. ಸರ್ಕಾರ ಇದರ ಅಧ್ಯಯನವನ್ನು ಮಾಡುತ್ತಿದೆ. ಎಲ್ಲಾ ಸದಸ್ಯರುಗಳು ಸಾಕಷ್ಟು ಸಲಹೆಗಳನ್ನು ಕೊಟ್ಟಿದ್ದಾರೆ. ಇವರ ಬೇರೆ ಬೇರೆ ಸಲಹೆಗಳಿಂದ ಇದಕ್ಕೆ ಹೆಚ್ಚು ಮಹತ್ವ ಮತ್ತು ಗಾಂಭೀರ್ಯ ಬಂದಿದೆ. ಇದನ್ನು ಪರಿಶೀಲನೆ ಮಾಡಿ ಮುಂದೆ ಏನು ಕ್ರಮಗಳನ್ನು ತೆಗೆದುಕೊಳ್ಳಬೇಕೆಂಬ ಬಗ್ಗೆ ತೀರ್ಮಾನ ಮಾಡುತ್ತೇನೆ. ನಂತರ ಈ ಬಗ್ಗೆ ಮುಂದಿನ ಕ್ರಮಗಳನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ : – ಈ ಬಗ್ಗೆ ವರದಿಯನ್ನು ಯಾವಾಗ ಮಂಡಿಸುತ್ತೀರಿ?

ಅಧ್ಯಕ್ಷರು : – ಈಗ ಸದನವನ್ನು 2.45 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಭೋಜನದ ವಿರಾಮಕ್ಕೆ 1 ಗಂಟೆ 42 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ಮಧ್ಯಾಹ್ನ 2.45 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು)

ಸದನವು ಪುನಃ ಅಪರಾಹ್ನ 3 ಗಂಟೆ 23 ನಿಮಿಷಕ್ಕೆ ಸಮಾವೇಶಗೊಂಡಿತು.

(ಮಾನ್ಯ ಸಭಾಧ್ಯಕ್ಷರಾದ ಶ್ರೀ ಕೆ.ಜಿ. ಬೋಪಯ್ಯನವರು ಪೀಠವನ್ನು ಅಲಂಕರಿಸಿದರು)

4. ವಿತ್ತೀಯ ಕಾರ್ಯಕಲಾಪ

2011–12ನೇ ಸಾಲಿನ ಪೂರಕ ಅಂದಾಜುಗಳ (3ನೇ ಮತ್ತು ಅಂತಿಮ ಕಂತು) ಕುರಿತು ಚರ್ಚೆ ಮತ್ತು ಸರ್ಕಾರದ ಉತ್ತರ.

ಅಧ್ಯಕ್ಷರು : – ಮಾನ್ಯ ಮುಖ್ಯಮಂತ್ರಿಗಳೇ ವಿವರಿಸಿ.

ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು) : – ಮಾನ್ಯ ಸಭಾಧ್ಯಕ್ಷರೆ, 2011–12ನೇ ಸಾಲಿನ 3ನೇ ಮತ್ತು ಅಂತಿಮ ಕಂತಿನ ಪೂರಕ ಅಂದಾಜಿಗೆ ಸಂಬಂಧಪಟ್ಟಂತೆ ಸದನದ ಮುಂದೆ ಮಂಡಿಸುತ್ತಿದ್ದೇನೆ. ಮತ್ತು ಚರ್ಚೆಗೆ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. 3ನೇ ಮತ್ತು ಅಂತಿಮ ಕಂತು 2011–12ನೇ ಸಾಲಿಗೆ ಒಟ್ಟು ರೂ. 4177.77 ಕೋಟಿಗಳ ಬೇಡಿಕೆಯನ್ನು ಸದನದ ಮುಂದೆ ಇಟ್ಟಿದ್ದೇವೆ. ಇದರಲ್ಲಿ ಕೇಂದ್ರದ ಸಹಾಯ ಧನ ಮೊತ್ತ ರೂ. 97 ಕೋಟಿಗಳು ಮತ್ತು ಲೆಕ್ಕ ಹೊಂದಾಣಿಕೆ ಮೊತ್ತ ರೂ. 97 ಲಕ್ಷಗಳು ಇದಲ್ಲದೆ hand recoveries ಸುಮಾರು ರೂ. 2095 ಕೋಟಿಗಳು, ಸಾಮಾನ್ಯ ರಾಜಸ್ವದಿಂದ ಬರಬಹುದಾದಂಥ ನಿವ್ವಳ ಮೊತ್ತ ರೂ. 3984.73 ಕೋಟಿಗಳು